ಕನ್ನಡ ಸಾಹಿತ್ಯದಲ್ಲಿ ಕಣ್ಮರೆಯಾಗುತ್ತಿರುವ ಅಲಕ್ಷಿತ ಅವಧೂತರು ಒಂದು ಚಿಂತನೆ

ಡಾ.ಕೆ ಎಸ್ ಶಿವಪ್ರಕಾಶ
ಕನ್ನಡ ಉಪನ್ಯಾಸಕರು

ಇಡೀ ವಿಶ್ವದ ಮಹಾಪುರುಷರೆಲ್ಲರೂ ಆಧ್ಯಾತ್ಮಿಕತೆಯ ತುತ್ತತುದಿಗೇರಿದ್ದೇ ಹೀಗೆ. ಪೂಜೆ ಪುನಸ್ಕಾರ, ವ್ರತಾರಾಧನೆಗಳು, ಉಪಾಸನೆ ಮತ್ತು ಸೇವೆ ಮೊದಲಾದ ಪ್ರಕ್ರಿಯೆಗಳ ಉದ್ದೇಶ, ಆರಾಧ್ಯ ಅಥವಾ ಸೇವ್ಯ ಶಕ್ತಿಯಂತಾಗುವುದು. ಅದು ಕಠಿಣವಾದ, ಕಂಟಕಮಯವಾದ ಜಟಿಲ ಕುಟಿಲ ಮಾರ್ಗ. ಆ ಮಾರ್ಗದ ಆರಂಭದಲ್ಲಿಯೇ ಸೋಲುವವರು ಹಲವರಾದರೆ, ಮತ್ತೆ ಕೆಲವರು ಮಧ್ಯಮ ಹಂತಗಳಲ್ಲಿಯೇ ಜಾರಿಹೋಗುವುದುಂಟು. ಒಬ್ಬರೋ ಇಬ್ಬರೋ ಅಥವಾ ಕೆಲವು ಮಂದಿ ಮಾತ್ರವೇ ಈ ಎಲ್ಲ ವಿಘ್ನಗಳನ್ನು ದಾಟಿ ಹಲವು ಅಗ್ನಿಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಗುರಿಯನ್ನು ಮುಟ್ಟಬಲ್ಲರು. ಬುದ್ಧ, ಕ್ರಿಸ್ತ, ಪೈಗಂಬರ್, ಬಸವಣ್ಣ, ಅವರನ್ನು ಅವತಾರ ಪುರುಷ, ವಿಭೂತಿ ಪುರುಷರೆಂದು ಕರೆದರು. ಅವರು ಮರ್ತ್ಯದಲ್ಲಿಯೇ ಅಮರ್ತ್ಯವರ್ಗಕ್ಕೆ ಸೇರಿದವರು. ವಿಭೂತಿತ್ವ ಎಂದರೆ ವಿಶೇಷವಾದ ಭೂತಿ. ಯಾವುದೋ ಒಂದು ವರ್ಗಕ್ಕೆ ಸೀಮಿತವಾಗದೆ, ಬದುಕಿನ ಎಲ್ಲಾ ಪ್ರಕಾರಗಳಲ್ಲಿ ಅದರ ಪ್ರಕ್ರಿಯೆಯು ಆವರಿಸಿರುತ್ತದೆ. ಸಂಸಾರ ನಿಸ್ಸಾರವೆಂದು ತ್ಯಜಿಸಿ, ಸನ್ಯಾಸಿಗಳಾಗಿ ಜ್ಞಾನ ಸಂಪಾದಿಸಿಕೊಂಡವರಿಂದಲೇ ಸಮಾಜ ದುರಾವಸ್ಥೆಯನ್ನು ಅನುಭವಿಸಬೇಕಾಗಿ ಬಂದಾಗ್ಯೂ, ಯಾರೂ ವಿರೋಧಿಸಲಿಲ್ಲ. ವಿರೋಧಿಸುವುದೇ ಅಧರ್ಮ ಎನ್ನುವಷ್ಟರ ಮಟ್ಟಿಗೆ ಅವರ ತಿಳುವಳಿಕೆ ಗಟ್ಟಿಗೊಂಡಿತ್ತು. ಆಗ ಅನಿವಾರ್ಯವೆಂಬಂತೆ ತಮ್ಮ ಸಮಾಜದ ಮೇಲು ಪ್ರಶ್ನಿಸಬೇಕಾಯಿತು. ಆ ಧರ್ಮಶಾಸ್ತ್ರ, ಶೃತಿ ಸ್ಮ ೃತಿ, ಆಗಮ, ಪುರಾಣಗಳ ತತ್ವ, ಸಿದ್ಧಾಂತ ಹೇಳಿಕೆಗಳೆಲ್ಲ ಕೇವಲ ಗ್ರಂಥಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಅವು ಆಚರಣೆಯಲ್ಲಿರಲಿಲ್ಲ. ಹೀಗೆ ಪಡೆದುಕೊಂಡ ಜ್ಞಾನ ಆಚರಣೆಗೆ ಬಾರದಿದ್ದರೇನು ಪ್ರಯೋಜನ? ಅದರಲ್ಲಿ ಕೆಲವು ಆಚರಣೆಗಳಾಗಿ ಜಾರಿಗೊಂಡಿದ್ದವು. ಸಮಾಜದ ಶೋಷಣೆಗೆ ಅಸಮಾನತೆಗೆ ತಾಣವಾಗಿರುವುದು ತಿಳಿದ ವಿಷಯ. ಕೇವಲ ಒಂದೇ ಪಂಗಡ ಜನರ ಹಿತಕ್ಕಾಗಲಿ ಶ್ರಮಿಸದೇ ಇಡೀ ಮನುಕುಲದ ಒಳತಿಗಾಗಿ, ಛಿದ್ರಗೊಂಡ ಮನಸ್ಸುಗಳ ಒಗ್ಗೂಡಿಸುವಿಕೆಗಾಗಿ ಪ್ರಯತ್ನಿಸಿದ ಪ್ರಾಮಾಣಿಕತೆ ನಿಜಕ್ಕೂ ಒಪ್ಪಿತವಾದದ್ದು. ಅವರ ಕನಸು ಕನವರಿಕೆಗಳಾಗಲಿ, ಆಸೆ ಆಕಾಂಕ್ಷೆಗಳಾಗಲಿ, ನೆಪ ನೆನಪುಗಗಲಿ, ಭವಬಂಧನಗಳಾಗಲೀ ಅವರ ಆಧ್ಯಾತ್ಮಿಕ ಆಲೋಚನಗಳಿಗೆ ಅಡ್ಡಿಪಡಿಸಲಿಲ್ಲ. ಕೇವಲ ಲೋಕೋತ್ತರವಾದ ಭಿನ್ನಣ ಹಾಗೂ ಭೀಮತ್ಸರಗಳ ಸಂಕೀರ್ಣತೆಯನ್ನು ದೂರ ಸರಿಸುವುದರ ಜೊತೆಗೆ ಸಮಾಜದಲ್ಲಿ ಮಡುಗಟ್ಟಿನಿಂತಿದ್ದ ಶೋಷಣೆಯ ವಿರುದ್ಧ ಡಿಂಡಿಮವನ್ನು ಭಾರಿಸುವುದು ಯೌಗಿಕ ಪುರುಷರ ಒಂದು ಧ್ಯೇಯವೆಂಬಂತೆ ಕಂಡುಬರುತ್ತದೆ. ಕೆಲವರು ನೇರವಾಗಿ ಪ್ರತಿಭಟಿಸಿದರೆ, ಇನ್ನೂ ಕೆಲವರು ಮೌನದ ಮೂಲಕ ಸಮಾಜದ ಕಂದಾಚಾರಗಳನ್ನು ಪ್ರಶ್ನಿಸಿದರು. ಬಡಜನರ ದುಃಖ ದುಮ್ಮಾನಗಳಿಗೆ ಓಗೊಟ್ಟವರಂತೆ, ಹಲವಾರು ಪವಾಡ ಸಾದೃಶ್ಯಗಳ ಮೂಲಕ ಸ್ಪಂದಿಸುವ ಪ್ರಯತ್ನ ಮಾಡಿದರು. ತಿಳಿದೋ, ತಿಳಿಯದೆಯೋ ಭಕ್ತರ ನಿರೀಕ್ಷೆಗಳಿಗೆ ಹಸಿರ ಬಿಡಿಸಿದರು. ಉದ್ದೇಶ ಪೂರ್ವವಲ್ಲದ ಕೆಲವೊಮ್ಮೆ ವಿವೇಚನಾರಹಿತರಾಗಿ ಗತಿಮತಿಗಳು ನಿರ್ಲಿಪ್ತ ಬದುಕಿನಲ್ಲಿದ್ದುಕೊಂಡೇ ಬರಗಾಲ, ಮಳೆ ಬೆಳೆಯ ಕುರಿತ ಮುನ್ಸೂಚನೆಗಳು, ಕಾಲರ, ಪ್ಲೇಗುಗಳಂಥ ಮಾರಕ ರೋಗಗಳ ನಿವಾರಣೆ, ಫಲವಂತಿಕೆಯನ್ನು ಅನುಗ್ರಹಿಸುವುದು ಮುಂತಾದ ಭಕ್ತರ ಬದುಕಿನ ಆಶಯಗಳನ್ನು ಈಡೇರಿಸುತ್ತಿದ್ದರು. ಅಂತಹ ಸಂದಿಗ್ಧ ಪರಿಸ್ಥಿತಿಯ ಜಾಡ್ಯದಿಂದ ಬಿಡಿಸಿಕೊಂಡವರು ಆರಾಧನಾ ಹಾಗೂ ಧಾರ್ಮಿಕ ಮಹಾಪುರುಷರನ್ನು ಕಾಣುತ್ತಿರುವುದು ಭಾರತೀಯ ಸಂಸ್ಕೃತಿಯಲ್ಲಿ ಹೊಸದೇನಲ್ಲ. ಪ್ರತಿಯೊಂದು ವಿಧಿವಿಧಾನಗಳು ಪೂಜನೀಯ ರೂಪಾಂತರ ಪಡೆದು ತದನಂತರವೇ ಸಾಮಾಜಿಕ ನೆಲೆಯೊಳಗೆ ಅಸ್ಥಿತ್ವವನ್ನು ಭದ್ರಪಡಿಸಿಕೊಂಡಿರುವುದನ್ನು ಕಾಣುತ್ತೇವೆ. ಆರಾಧನಾ ಭಾವನೆ ಉಜ್ವಲವಾಗಿ ತಪಸ್ಯಾರೂಪಕ್ಕೆ ತಿರುಗಿದ ಉಪಾಸನೆಯಾಗುತ್ತದೆ. ಉಪಾಸನೆ ತುತ್ತತುದಿಗೆ ತಲ್ಲೀನತಾ ರೂಪದ ಸಾಕ್ಷಾತ್ಕಾರದಲ್ಲಿ ಪರ್ಯಾವಸಾನ ಹೊಂದುತ್ತದೆ. ಆಗ ಸಾಧಕನಿಗೆ ಸಿದ್ದಿಯಾಯಿತೆಂದು ಹೇಳುತ್ತೇವೆ. ಪೂಜೆ ಆರಾಧನೆ ಮೊದಲಾದ ಪ್ರಕ್ರಿಯೆಗಳು ಲೌಕಿಕ ಅಲೌಕಿಕ ಸಿದ್ಧಿಗೆ ಅನಿವಾರ್ಯವೆಂಬುದು ಸಾಮಾನ್ಯ.

ದುಃಖ ದುಮ್ಮಾನಗಳ ಮೇಳೈಸಿಕೊಂಡು ಬಂದರೂ ಸಹ ಕುಗ್ಗಿ ಕುಬ್ಜರಾಗದಷ್ಟು ಪರಲೋಕದ ವ್ಯಾಮೋಹಕ್ಕೆ ಜಾರಿಬಿದ್ದರು. ಅಗೋಚರತೆಯೆಡೆಗೆ ಮನಸ್ಸು ಸದಾ ಸಮೀಪಿಸುತ್ತಿರುವುದು ಲೌಕಿಕತೆಯ ಲಕ್ಷಣವಾಗಿ ನೆಲೆಗೊಂಡಿತ್ತು. ಅವರ ಆಧ್ಯಾತ್ಮಿಕತೆಯ ಸಾರದಲ್ಲಾಗಲೀ, ಅವರು ಸಂಚಾರಿಸಿದ ಪ್ರಯಾಣದಲ್ಲಾಗಲೀ, ಸಿದ್ಧಿಸಾಧನೆಗಳಲ್ಲಾಗಲೀ ಹೊರಗಡೆಗೆ ವಿಭಿನ್ನವೆಂಬಂತೆ ಕಂಡುಬಂದರೂ, ಅಂತರಂಗದ ನಿಲುವುಗಳಲ್ಲಿ ಸಾಮ್ಯವನ್ನು ಹೆಚ್ಚಾಗಿ ಕಾಣಬಹುದಾಗಿದೆ. ಅಂಥಹ ಶಿಷ್ಯರನ್ನು, ಸಮಕಾಲೀನ ಧಾರ್ಮಿಕ ಸಂತರನ್ನು ವರ್ತಮಾನದ ಪರಿಸ್ಥಿತಿಗೆ ವಿಲೀನಗೊಳಿಸಿ ನೋಡುವುದು ಮತ್ತು ಅವರವರ ಅಲೌಕಿಕ ಆಲೋಚನೆಗಳನ್ನು ಅವಲೋಕಿಸುವುದು ಸೂಕ್ತವೆಂದೆನಿಸುತ್ತದೆ.

ಭಾರತೀಯ ಪುರಾಣ ಆಗಮಗಳು, ವೇದ ಉಪನಿಷತ್ತುಗಳು ಮುಂತಾದ ಧಾರ್ಮಿಕ ಸಾಹಿತ್ಯ ಕೃತಿಗಳಲ್ಲಿ ಗುರು ಶಿಷ್ಯರ ಬಗೆಗಿನ ಹಲವಾರು ವಿರೋಧವಾದ ಎನ್ನುವುದಕ್ಕಿಂತಲೂ ಪರವಾದ ಚಿಂತನೆಗಳು ನಡೆದಿರುವುದೇ ಹೆಚ್ಚು. ಪುರಾತನ ಕಾಲದಿಂದಲೂ ಅದಕ್ಕೆ ವಿಶೇಷವಾದ ಮಹತ್ವ ಇದೆ. ಗುರು ಎಂದರೆ ಯಾರು? ಆತನ ವ್ಯಕ್ತಿತ್ವ ವಿಶಿಷ್ಟತೆಗಳೇನು? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಬದಲು ಗುರುಯೆಂಬುವವನು ಶಿಷ್ಯನ ಭವದ ಚಿಂತೆಗಳಿಂದ ವಿಮುಕ್ತಿಗೊಳಿಸಿ ಪರಮಾರ್ದಿ್ಕ ಆಲೋಚನೆಗೆ ಹೇಗೆ ಹುರಿದುಂಬಿಸಬಲ್ಲ, ಆ ಮೂಲಕ ಸಾಂಸಾರಿಕ ಬದುಕಿನಲ್ಲಿದ್ದುಕೊಂಡೇ ಸಮಾಜದ ಸ್ವಸ್ಥತೆಯನ್ನು ಹೇಗೆ ಕಾಪಾಡಬೇಕೆಂಬ ನಿಲುವುಗಳಿಗೆ ಪ್ರೇರಕನಾಗುತ್ತಾನೆ ಎಂಬುದು ಮುಖ್ಯವಾಗುತ್ತದೆ. ಗುರುವಿನ ಸ್ಥಾನ ಪಲ್ಲಟವನ್ನು ಗಮನಿಸಲು ಸಹಕಾರಿಯಾದ ಅಲ್ಲಮಪ್ರಭುವಿನ ಒಂದು ವಚನ ಹೀಗಿದೆ. ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದೊಡೆ ಆಗಲಿ ಮಹಾ ಪ್ರಸಾದವೆಂದನಯ್ಯಾ. ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದೊಡೆ ಆಗಲಿ ಮಹಾ ಪ್ರಸಾದವೆಂದನಯ್ಯಾ. ದ್ವಾಪರ ಯುಗದಲ್ಲಿ ಶ್ರೀಗುರು ಶಿಷ್ಯಂಗೆ ಜಂಗಿಸಿ ಬುದ್ಧಿಯ ಕಲಿಸಿದೊಡೆ ಆಗಲಿ ಮಹಾ ಪ್ರಸಾದವೆಂದನಯ್ಯಾ. ಕಲಿಯುಗದಲ್ಲಿ ಶ್ರೀಗುರು ಶಿಷ್ಯನಿಗೆ ವಂದಿಸಿ ಬುದ್ಧಿಯ ಕಲಿಸಿದೊಡೆ ಆಗಲಿ ಮಹಾಪ್ರಸಾದವೆಂದನಯ್ಯಾ. ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕೆ ನಾನು ಬೆರಗಾದೆನು . ಕಾಲದಿಂದ ಕಾಲಕ್ಕೆ ಸಾಮಾಜಿಕ ಚಹರೆಗೆ ಅನುಗುಣವಾಗಿ ಅನಿವಾರ್ಯವೆಂಬಂತೆ ಬದಲಾಗುತ್ತಿರುವ ಗುರು ಶಿಷ್ಯರ ಸಂಬಂಧವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಹನ್ನೆರಡನೆಯ ಶತಮಾನದಿಂದೀಚೆಗೆ

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ ಎಂಬ ಧೋರಣೆಯು ಮಹತ್ವಪಡೆದರೆ, ಇಪ್ಪತ್ತನೆಯ ಶತಮಾನದ ಆಸುಪಾಸಿನಲ್ಲಿ ಗುರುವಿನ ಸಮಾನನಾಗುವ ತನಕ ದೊರೆಯದಣ್ಣಾ ಮುಕುತಿ ಎಂಬ ತಳಹದಿಗೆ ಬಂದು ನಿಂತಿತು. ವರ್ತಮಾನದ ಸ್ಥಿತಿಯಲ್ಲಿ ಅದು ಗುರುವಿನ ಮೀರಿಸುವ ತನಕ ದೊರೆಯದಣ್ಣಾ ಮುಕುತಿ ಎಂಬ ಸೈದ್ಧಾಂತಿಕ ಬಿಕ್ಕಟ್ಟು ತಲೆದೋರಿರುವುದು ಕಾಣುತ್ತೇವೆ. ಅರಿವೇ ಗುರು ನಿಜ ಆದರೆ ಅಂತರಂಗದ ಅರಿವಿಗೆ ವಿಷಯಗಳ ಮುಸುಕು ತೆರೆಯ ಸರಿಸಿ ಅರುವಿನ ಬಾಗಿಲ ತೆರೆಯಲು ಶ್ರೀಗುರುವಿನ ಉಪದೇಶ ಬೇಕೇ ಬೇಕು. ನಾಲ್ಕುವೇದ, ಆರುಶಾಸ್ತ್ರ, ಹದಿನೆಂಟು ಪುರಾಣ ಬೇಡವಯ್ಯ ಎನಗೆ ಭಗವಚ್ಚಿಂತನೆವೊಂದೆ ಸಾಕಯ್ಯಾ. ಪುಣ್ಯ ಕ್ಷೇತ್ರದಿ ಅಲೆಯುವುದು ಸಾಕಯ್ಯಾ, ಗಿರಿಹತ್ತಿ ಇಳಿಯುವುದು ಬೇಡವಯ್ಯಾ ನಿಮ್ಮ ಪಾದ ಸ್ಪರ್ಶವೊಂದೆ ಸಾಕಯ್ಯಾ ಎಂಬುದರಲ್ಲಿ ಗುರುವೇ ಅರಿವು ಎಂಬ ಹರವು ಶಿಷ್ಯರಲ್ಲಾಗಲಿ ಭಕ್ತರಲ್ಲಾಗಲಿ ಬೇರೂರಿರುವುದು, ಗುರುಸ್ಥಾನವನ್ನು ಇನ್ನಷ್ಟು ಭದ್ರಗೊಳಿಸಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ತಿಕ್ಕಯ್ಯಾವಧೂತರು

ಅಲೌಕಿಕ ಪಂಥಗಳ ಮಹಾಪುರುಷರ ಬದುಕು ಅಷ್ಟೇ ಅಲ್ಲ, ಅವರನ್ನು ಜನರು ಗುರುತಿಸುತ್ತಿದುದು ಅವರ ಬಾಹ್ಯವರ್ತನೆಗಳಿಂದ. ಹೊರಗಣದ ಭೂಷಣಕ್ಕಿಂತ ಅಂತರಂಗದ ಸ್ವಚ್ಛತೆಗೆ ಅವರು ಹೆಚ್ಚು ಪರಿಶ್ರಮ ಪಡುತ್ತಿದ್ದರು. ಎರ್ರಿ, ತಿಕ್ಕ ಎಂಬ ಹೆಸರುಗಳ ಅವರ ಬದುಕನ್ನು ಸೂಚಿಸುವಂತಿದ್ದರಿಂದ ಅವರನ್ನು ಆ ಹೆಸರುಗಳಿಂದಲೇ ಕರೆಯುತ್ತಿದ್ದರು. ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು ತಮ್ಮ ಸಿದ್ಧಿ ಸಾಧನೆಗಳ ಪವಾಡಗಳ ಮೂಲಕ ಭಕ್ತರ ಬದುಕನ್ನು ಹಸನಾಗಿಸಿದರು. ಅಂಥವರಲ್ಲಿ ಚೇಳಗುರಿಕೆ ಎರ್ರಿತಾತನಿಗೆ ಅತ್ಯಂತ ನಿಷ್ಠೆಯಿಂದ ಸೇವೆಗೈದ ತಿಕ್ಕಯ್ಯಾವಧೂತರದು ವಿಶಿಷ್ಟ ವ್ಯಕ್ತಿತ್ವ. ವೈರಾಗ್ಯ, ಶೀಲತ್ವ, ವಾಕ್ಚತುರತೆ, ನಿಷ್ಠುರತೆ, ಸತ್ಯಸಂಬಂಧ, ಅಚಲಭಕ್ತಿ, ಕಾಯಕ ನಿಷ್ಠೆ ತಿಕ್ಕಯ್ಯನವರಲ್ಲಿ ಮನೆಮಾಡಿಕೊಂಡಿದ್ದವು. ಎರ್ರಿತಾತನ ದರ್ಶನಕ್ಕೆಂದು ಹಗಲೂ ಇರುಳೂ ಮೂಲೆ ಮೂಲೆಗಳಿಂದ ಭಕ್ತರು ಬರುತ್ತಿದ್ದರು. ದರ್ಶನಾರ್ಥಿಗಳ ಊಟ ವಸತಿಗಳ ಸೌಕರ್ಯಕ್ಕಾಗಿ ತಾತನಿಗೆ ಅಂತಸ್ತಿಗೆ ಅನುಗುಣವಾದ ಒಂದು ಮಠದ ಅವಶ್ಯಕತೆ ಹೆಚ್ಚಾಯಿತು. ವಿವಿಧ ಗ್ರಾಮ, ಜಿಲ್ಲೆ ಹಾಗೂ ರಾಜ್ಯಗಳಿಂದ ಬರುತ್ತಿದ್ದ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಇಮ್ಮಡಿಗೊಳ್ಳುತ್ತಾ ಬಂತು. ತಾತನು ಇರುತ್ತಿದ್ದ ಗೃಹ ಚಿಕ್ಕದಾಗಿ ಸಾಮಾನ್ಯ ಗೃಹಸ್ಥನಂತೆ ಮನೆಯಲ್ಲಿರುವುದು ಸೂಕ್ತವಲ್ಲವೆಂದೆನಿಸಿತು.ಈ ಮಹಾಸ್ವಾಮಿಗೆ ಒಂದು ದೊಡ್ಡ ಮಠವನ್ನೆ ಕಟ್ಟೋಣ ಎಂದು ಭಕ್ತರು ನಿರ್ಧರಿಸಿದರು. ಮಠ ನಿರ್ಮಾಣ ಕಾರ್ಯದ ಭಾವ ಸ್ಫುರಿಸಿದ್ದು ಪ್ರಥಮತಃ ತಿಕ್ಕಯ್ಯನಿಗೆ ತನ್ನ ತಲೆಯಲ್ಲಿದ್ದ ತಿಕ್ಕನ್ನು ಮಂದಿಯ ತಲೆಗೂ ತಿಕ್ಕಿ ಮಠವನ್ನು ಕಟ್ಟಲು ಎಲ್ಲರನ್ನೂ ಪ್ರೇರೇಪಿಸಿ, ಪ್ರಚೋದಿಸಿ, ಹುರಿದುಂಬಿಸಿ ಸಾಧಿಸಿದ ಕೀರ್ತಿ ಮಹಾನುಭಾವಿಯಾದ ತಿಕ್ಕಯ್ಯನದು. ಮಠದ ನಿರ್ಮಾಣ ಆಲೋಚನೆಯ ಜೊತೆಗೆ, ಎಲ್ಲಿ ಮಠವನ್ನು ಕಟ್ಟಿಸಬೇಕು? ಅದರ ಮೂರ್ತ ರೂಪಕ್ಕೆ ಇಂಬುಕೂಡುವುದು ಕಷ್ಟವೆನಿಸಿ ಹಿರಿಯರು ಬಂದು ಆಕಡೆ ಈಕಡೆ ಸುತ್ತಾಡಿ ಯಾವ ಆಲೋಚನೆಗಳು ಹೊಳೆಯದಿದ್ದರಿಂದ ತಾತನಲ್ಲಿ ಬಂದು ಕೇಳಿದಾಗ, ಊರ ಒಕ್ಕರಾಣಿ ಕಟ್ಟಿಸಲು ಕಲ್ಲುಗಳು ಹಾಕಿದ ಜಾಗಕ್ಕೆ ತಾತನು ಬಂದುನೋಡಿ ಅಲ್ಲಿಂದ ಮಠ ಕಟ್ಟುವ ಜಾಗಕ್ಕೆ ನಿಂತು ಮೂತ್ರ ವಿಸರ್ಜನೆ ಮಾಡಿದರು. ಒಂದು ಮಾತು ಆಡದೇ ಕೇವಲ ಮೌನವೇ ಮಾತಾಗಿ ತೋರಿತು. ಅಂದಿನ ಗ್ರಾಮದ ಮಠದಯ್ಯನವರಾದ ಗಂಗಾಧರಪ್ಪನವರು ಇಲ್ಲಿಯೇ ಮಠಕಟ್ಟಿಸಲು ತಾತನಿಚ್ಛೆ ಎಂದು ತಾತನ ಮೂತ್ರ ವಿಸರ್ಜನೆಯ ಸಂಕೇತವನ್ನು ವಿವರಿಸಿದರು. ತಿಕ್ಕಯ್ಯನವರು ಸಮ್ಮತಿಸಿದ್ದರಿಂದ ಗ್ರಾಮದ ಹಿರಿಯರು, ಅಕ್ಕಪಕ್ಕದ ಗ್ರಾಮದ ಹಲವಾರು ಭಕ್ತರ ಸಹಕಾರಗಳಿಂದ ತಿಕ್ಕಯ್ಯನವರು ನಾಡನ್ನೆಲ್ಲಾ ಸುತ್ತಾಡಿ, ಹೋದಲೆಲ್ಲಾ ಕಲ್ಲು ಕರುಗುವಂತೆ ಹಾಡಿ, ಮನಸೆಳೆಯುವಂತೆ ಮಾತಾಡಿ, ಗುರುಕಾರ್ಯಕ್ಕಾಗಿ ಹರಕಾರ್ಯಕ್ಕಾಗಿ ದೇಹಿ ಎಂದು ಬೇಡಿ ತಿಕ್ಕಯ್ಯ ತಾತನ ಮಠವನ್ನು ಕಟ್ಟಲು ಕಂಕಣಬದ್ಧರಾದರು. ಗ್ರಾಮದ ಜನ ತಮ್ಮ ಶಕ್ತ್ಯಾನುಸಾರವಾಗಿ ಸಹಾಯಹಸ್ತ ನೀಡಿದರು. ಶ್ರೀಬಳಗಾನೂರು ಮರಿಸ್ವಾಮಿಗಳು ಕುಳಿತು ಕಲ್ಲಾಟವಾಡಿ ಕಲ್ಲಿನ ಮೇಲೆ ಕಲ್ಲಿಟ್ಟು ಇಲ್ಲೊಂದು ದೊಡ್ಡ ಮಠವಾಗುತ್ತದೆಂಬ ಭವಿಷ್ಯವಾಣಿಯ ಸಾರ್ಥಕಗೊಂಡಂತೆ ಅದೇ ಸ್ಥಳದಲ್ಲಿ ಮಠದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಮಠವನ್ನು ಕಟ್ಟುವುದು ಅಷ್ಟು ಸುಲಭದ ಮಾತಲ್ಲ. ದಿನದ ಊಟಕ್ಕೂ ಪರದಾಡಬಹುದಾದ ಗಂಭೀರ ಬರಗಾಲವನ್ನು ಗ್ರಾಮದ ಜನತೆಯಷ್ಟೇ ಅಲ್ಲ, ಸುತ್ತ ಮುತ್ತಲಿನ ಅನೇಕ ಪ್ರದೇಶಗಳಿಗೂ ಅದರ ಛಾಪು ವಿಸ್ತರಿಸಿಕೊಂಡ ಕಾಲವದು. ಅಂಥಹ ಸಂಧಿಗ್ಧ ಪರಿಸ್ಥಿತಿಯಲ್ಲಿ ತಿಕ್ಕಯ್ಯನು ಮೂಲತಃ ಆಶುಕವಿಯಾಗಿದ್ದು ಎರ್ರಿತಾತನ ಸಿದ್ಧಿಸಾಧನೆಗಳನ್ನು ಕುರಿತು ಹಾಡಿನ ರೂಪದಲ್ಲಿ ಭಕ್ತ ಜನಕ್ಕೆ ತಿಳಿಸುತ್ತಾ ದವಸ ಧಾನ್ಯಗಳನ್ನು ಹಣವನ್ನು ಕೂಡಿಸುತ್ತಾ ಮಠದ ಕಾರ್ಯಕ್ಕೆ ಕೈಂಕರ್ಯ ತೊಟ್ಟನು.

ಭಕ್ತಿಯ ತಿಕ್ಕಿನೊಳಗೆ ತನ್ನನ್ನು ತಾನು ವಿಲೀನಗೊಳಿಸಿ ಅನೇಕರನ್ನು ಅದರ ತೆಕ್ಕೆಯೊಳಗೆ ಸೇರಿಸಿದನು. ಈ ಕಾರ್ಯದಲ್ಲಿ ಹೆಚ್ಚಾಗಿ ಸಹಾಯ ಹಸ್ತ ನೀಡಿದವರಲ್ಲಿ ಕೊಕ್ಕರಚೇಡು ಗ್ರಾಮದ ಸಾಗರದ ಈಶ್ವರಪ್ಪನೆಂಬಾತನು ಮೂರು ಸಾವಿರ ರೂಪಾಯಿ, ನಾಲ್ಕುನೂರು ರೂಪಾಯಿ ಬೆಲೆ ಬಾಳುವ ಎತ್ತುಗಳು, ನೂರಾರು ರೂಪಾಯಿ ಬೆಲೆಬಾಳುವ ಬಂಡಿಕೊಟ್ಟು ಮಠದ ಕಾರ್ಯದಲ್ಲಿ ತುಂಬಾ ನೆರವಾದ. ಛಾವಣಿ ಫಕೀರಪ್ಪನೆಂಬ ಶ್ರೀಮಂತ ವೈಶ್ಯ ಮೂರುಸಾವಿರ ರೂಪಾಯಿಕೊಟ್ಟು, ತ್ಯಾಗ ಬುದ್ಧಿಯಿಂದ ತನ್ನ ಶ್ರೀಮಂತಿಕೆ ಯನ್ನು ಸಾರ್ಥಕಪಡಿಸಿಕೊಂಡ. ಆಗಲೇ ಸುಮಾರು ಒಂದು, ಒಂದೂವರೆ ಎಕರೆಯಷ್ಟು ಭೂಮಿಯನ್ನು ಆಕ್ರಮಿಸಿಕೊಂಡು ಆ ಮಠವನ್ನು ಕಟ್ಟಿಸಿ, ಅರವತ್ತಡಿ ಉದ್ದ, ನಾಲ್ವತ್ತಡಿ ಅಗಲ, ಹದಿನಾರಡಿ ಎತ್ತರದ ಒಂದು ಭವ್ಯವಾದ ಶಿಲಾಮಠವನ್ನು ಕಟ್ಟಿಸಿದ ತಿಕ್ಕಯ್ಯ, ಇಂದು ಬೆಳೆಯುತ್ತಿರುವ ವಿಶಾಲವಾದ ಮಠದ ಮೂಲ ಸ್ಫೂರ್ತಿಯಾದವರು. ಮಠವನ್ನು ಕಟ್ಟುವಾಗ ಅನುಭವಿಸಿದ ಕಷ್ಟಕ್ಕಿಂತ ಎರ್ರಿತಾತನನ್ನು ಹೊಸಮಠಕ್ಕೆ ಕರೆತರುವಲ್ಲಿ ಪಟ್ಟ ಫಜೀತಿ ಅಷ್ಟಿಷ್ಟಲ್ಲ. ಅದಕ್ಕೆ ಒಂದು ರಾದ್ಧಾಂತವೆ ನಡೆದು ಹೋಯಿತು. ಊರಲ್ಲಿ ಎರಡು ಪಂಗಡಗಳಾದವು. ಜಾಯನೂರು ಹನುಮಂತಪ್ಪ, ಮೋಕ ಕರಿಬಸಪ್ಪ, ಯಾಳ್ಪಿ ಭೀಮನಗೌಡನ ಪಂಗಡದ ಜನ ತಾಪಾತನನ್ನು ಮಠಕ್ಕೆ ಕರೆದು ತರಬೇಕೆಂದೂ, ಊರ ಹೊರಗಿನ ಮಠಕ್ಕೆ ತಾತನು ಹೋದರೆ ಆತನಿಗೆ ಊಟೋಪಚಾರಗಳನ್ನು ಮಾಡಿಸುವವರ್‍ಯಾರು? ಮಕ್ಕಳಿಗೂ, ಹೆಣ್ಣುಮಕ್ಕಳಿಗೂ, ಮುದುಕರಿಗೂ ಹೋಗಿ ನಮಸ್ಕಾರ ಮಾಡಲೂ ಎಡೆ ತೆಗೆದುಕೊಂಡು ಹೋಗಲು ಮಠ ದೂರವಾದ್ದರಿಂದ ತಾತನನ್ನು ಪಾರ್ಟಿಯ ಜನ ಅಡ್ಡಿಪಡಿಸಿದರು. ಮಠಗಳಲ್ಲಿನ ಭಿನ್ನತೆ ಇತ್ತೀಚಿನದಲ್ಲ ಅದರ ಕರಿಛಾಯೆ ಬಹುಕಾಲಗಳಷ್ಟು ಹಳೆಯದು. ಅದು ಬಳ್ಳಾರಿ ಪೋಲೀಸ್ ಠಾಣೆಗೂ, ಮ್ಯಾಜಿಸ್ಟ್ರೇಟ್ ಕಛೇರಿಗೂ ವರದಿ ಮಾಡಿದರಂತೆ ತಾತನನ್ನು ಊರು ಬಿಡಿಸಬಾರದು' ಬಿಡಿಸಿದರೆ ಊರಲ್ಲಿ ಭಿನ್ನಮತೀಯ ಪಂಗಡಗಳಾಗುವುದರಿಂದ ಬಡಿದಾಟ ನಡೆಯುವ ಪರಿಸ್ಥಿತಿ ಆಗ ನಿರ್ಮಾಣವಾಗಿತ್ತು.

ಅಷ್ಟೆಲ್ಲಾ ಕಷ್ಟಪಟ್ಟು ಕಟ್ಟಿದ ಮಠದಲ್ಲಿ ಆತನಿಲ್ಲದೆ ಖಾಲಿಯಿದ್ದರೆ ಪ್ರಯೋಜನವೇನು? ಅಯ್ಯನಗೌಡ, ಸಿದ್ಧಲಿಂಗನಗೌಡರ ವಾದದಲ್ಲಿಯಾಗಲೀ ಅವರ ಪಂಗಡದವರ ಆಮೋದಿಸಿಯಲ್ಲಾಗಲಿ ಅರ್ಥವಿಲ್ಲ ಎಂಬ ತಿಕ್ಕಯ್ಯನವರ ಪಾರ್ಟಿಯವರು ಆತನ ಬಳಿಗೆ ಹೋಗಿ ಇದೇನಪ್ಪಾ ಹೀಗಾಯಿತು ? ಎಂದು ಕೇಳಲು ತಾತನು ರಿಜರ್ವ್‌ಬರಲೇಳಯ್ಯ! ಎಂದರಂತೆ. (ಅದೇ ಪುಟ 39) ಕೆಲವೇ ದಿನಗಳಲ್ಲಿ ಎರಡು ಪಾರ್ಟಿಗಳ ಜನಕ್ಕೆ ಮ್ಯಾಜಿಸ್ಟ್ರೇಟಿನಿಂದ ಸಮನ್ಸ್ ಬಂದು ಹಾಜರಾಗಲು, ಮಠದ ಪಾರ್ಟಿಯವರು ನಾವು ತಾತನನ್ನು ಒತ್ತಾಯ ಮಾಡುವುದಿಲ್ಲ. ಆತನೇ ಬಂದರೆ ಕರೆದೊಯ್ಯುತ್ತೇವೆ ಎಂದು ಹೇಳಿದಾಗ ಅದಕ್ಕೆ

ಮ್ಯಾಜಿಸ್ಟ್ರೇಟರು ಎರಡು ಪಾರ್ಟಿಯರನ್ನು ದೂರನಿಲ್ಲಿಸಿ ತಾತನನ್ನು ಏನು ಸ್ವಾಮಿ ಇಲ್ಲೇ ಇರುವಿರಾ? ಮಠಕ್ಕೆ ಬರುವಿರಾ? ಎಂದು ಭಕ್ತಿಯಿಂದ ಕೇಳಲಾಗಿ ಹೋಗೋಣ ನಡಿಯಯ್ಯಾ ಎಂದು ತಾನೇ ಎದ್ದು ನಡೆದರು. ಆಗ ಮಠದ ಪಾರ್ಟಿಯವರು ವಾದ್ಯಗಳಿಂದ ವೈಭವದೊಡನೆ ಸರ್ಕಲ್ ಸಿಬ್ಬಂದಿಯೊಡನೆ ತಾತನವರನ್ನು ತಿಕ್ಕಯ್ಯನ ನೇತೃತ್ವದಲ್ಲಿ ಮಠಕ್ಕೆ ಕರೆತಂದರು. ಅತ್ಯಂತ ಕಷ್ಟನಿಷ್ಟುರಗಳನ್ನು ಸಹಿಸಿಕೊಂಡು, ಜಗ್ಗಾಟ ಹಿಗ್ಗಾಟಗಳಿಗೆ ಜಗ್ಗದೆ ಎಲ್ಲಾ ಭಕ್ತರಲ್ಲಿ ಭಕ್ತಿಯ ವಿಕಾಸಕ್ಕೊಂದು ಮಾರ್ಗವನ್ನು ನಿರ್ಮಿಸಿದನು. ಎರ್ರಿತಾತನಿಗೆ ವ್ಯವಸ್ಥಿತವಾದ ಮಠವನ್ನು ಕಟ್ಟಿಸಿ, ಎಲ್ಲರ ಅನುಗ್ರಹಕ್ಕೆ ತಾತನವರನ್ನು ಮಠದಲ್ಲಿ ತಂದಿರಿಸಿದ ತಿಕ್ಕಯ್ಯನವರು ಇಲ್ಲಿ ಬಹುದಿನವಿದ್ದು ಸೇವಿಸುವ ಭಾಗ್ಯ ಅವರಿಗಿರಲಿಲ್ಲ. ತಿಕ್ಕಯ್ಯನ ಕೆಲಸವನ್ನು, ಕೀರ್ತಿಯನ್ನು ಕಂಡು ಕರುಬುವ ಜನ ಹೆಚ್ಚಾಯಿತು. ಅಂಥವರದೇ ಒಂದು ತಂಡವಾಯಿತು. ಅವರೆಲ್ಲರೂ ಸೇರಿ ತಿಕ್ಕಯ್ಯನ ಧವಳ ಕೀರ್ತಿಗೆ, ಅವರ ಸೌಜನ್ಯತೆಗೆ ಭಂಗತರುವಂತಹ ಸುದ್ಧಿಗಳನ್ನು ಸೃಷ್ಟಿಸಿ ಅವುಗಳ ಪ್ರಚಾರವನ್ನೂ, ಪ್ರಸಾರವನ್ನೂ ಮಾಡತೊಡಗಿದರು. ಮೇಲೆ ಏಳುವವರನ್ನು ಕಾಲಿಡಿದು ಜಗ್ಗುವುದು ಸಮಾಜದಲ್ಲಿ ಕುಹಕಿಗಳ ನಿಯಾಮ. ಅಂಥಹ ದುರಾಲೋಪ ತಾತನ ಕಿವಿವರೆಗೂ ಮುಟ್ಟಿತು. ತಿಕ್ಕಯ್ಯನವರನ್ನು ಕೊಲೆಗೈಯುವ ಕುಹಕ ಯತ್ನಗಳನ್ನು ಮಾಡಲಾಯಿತು. ಇದಾವುದಕ್ಕೆ ಹೆದರದೆ ತಿಕ್ಕಯ್ಯ ಸಮಾಧಾನಿಯಾಗಿದ್ದನು. ತಿಕ್ಕಯ್ಯನ ಪ್ರಾಣಾಪಾಯ ಸ್ಥಿತಿಯನ್ನು ಅರಿತೇ ತಾತ ನೀನು ಹೊರಟು ಹೋಗಯ್ಯಾ! ಎಂದು ಅಪ್ಪಣೆ ಮಾಡಿದರಂತೆ. ತಿಕ್ಕಯ್ಯನು ಮರುಮಾತಾಡದೆ ಹೊರಟು ಹೋದ. ತಾತನನ್ನು ಏನು? ಏಕೆ? ಎಂದು ಪ್ರಶ್ನಿಸಲಿಲ್ಲ. ತನ್ನ ಶೀಲದ ಬಗ್ಗೆ ತಾನೇ ವಕಾಲತ್ ವಹಿಸಿ ವಾದಿಸಲಿಲ್ಲ. ತನ್ನನ್ನು ಏನೊಂದು ವಿಚಾರಿಸದೆ ಕುಹಕಿಗಳ ಮಾತಿಗೆ ಕಿವಿಗೊಟ್ಟಿನಲ್ಲ ತಾತ! ಎಂದು ಆಶ್ಚರ್ಯವೂ ಇಲ್ಲ; ಆ ವೇದನೆಯೂ ಇಲ್ಲ. ಆತನ ಮಾತನ್ನು ಅನುಮೋದಿಸುವುದೊಂದೇ ತನ್ನ ವಿಧಿ, ಉಳಿದದ್ದೆಲ್ಲ ನಿಷೇಧವೆಂದೂ ನಂಬಿದ್ದ ಶಿಷ್ಯ ಶಿಖಾಮಣಿ ತಿಕ್ಕಯ್ಯ. ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ಎಂಬ ಆಲೋಚನೆಯೇ ಆತನಲ್ಲಿ ಹುಟ್ಟಿರಲಿಲ್ಲ. ಎಲ್ಲೆಲ್ಲಿಯೂ ತಾತನಿದ್ದಾನೆಂದು ನಂಬಿದ ಭಕ್ತನಿಗೆ ಅಲ್ಲೇನು ಇಲ್ಲೇನು? ಎಲ್ಲಿದ್ದರೂ ಒಂದೇ. ಎಲ್ಲಿದ್ದರೂ ಆತನ ಸೇವೆಯನ್ನು ನಡೆದುಕೊಳ್ಳುವುದೇ ಮಹೋತ್ತಮವಾದ ಕಾರ್ಯ ಎಂದು ನಂಬಿದ್ದ ತಿಕ್ಕಯ್ಯ. ಎಲ್ಲವನ್ನು ತ್ಯಾಗ ಮಾಡಬಹುದು, ತ್ಯಾಗವನ್ನೇ ತ್ಯಾಗಮಾಡಿದವನೇ ತಿಕ್ಕಯ್ಯನಂಥ ಮಹಾತ್ಯಾಗಿ. ಬಿಡುವುದು ಅಭ್ಯಾಸವಿದ್ದ ತಿಕ್ಕಯ್ಯನಿಗೆ ಮಠಬಿಡುವುದು ಕಷ್ಟವಾಗಲಿಲ್ಲ. ಬಿಡುವಾಗ ಕಾರ್ಪಣ್ಯವನ್ನು ತೋರಲಿಲ್ಲ. ತಾತ ಬಾ ಎಂದಾಗ ಬಂದು ಮಾಡೆಂದದ್ದನ್ನು ಮಾಡಿದ. ಹೋಗೆಂದಾಗ ಹೊರಟು ಹೋದ. ತಾತನು ಕರೆದದ್ದು ಯಾರಿಗೂ ಕೇಳಿಸಿಲ್ಲ. ಹೋಗೆಂದು ಕಳಿಸಿದ್ದು ಮಾತ್ರ ಎಲ್ಲರಿಗೂ ಕೇಳಿಸಿತು. ಶಿಷ್ಯನ ಶ್ರದ್ಧೆ ಹೆಚ್ಚಿದಂತೆಲ್ಲ ಹಾತೊರೆತ ತೀವ್ರವಾದದಂತೆಲ್ಲ ಅವನ ಅವಿದ್ಯೆ ಕ್ಷೀಣವಾಗುತ್ತಾ, ಕೊನೆಗೆ ಇಬ್ಬರೂ, ಒಂದೆ ವಿದ್ಯಾಶಕ್ತಿಯ ಎರಡು ತುದಿಗೆಣಾಗುತ್ತಾರೆ. ಸಮರ್ಪಣ ಮತ್ತು ಪರಸ್ಪರ ಐಕ್ಯದ ಮೂಲಕ ಇಬ್ಬರೂ ಒಂದೇ ಯಾಗುತ್ತಾರೆ. ಗುರುವಿನ ಕೃಪೆ ಶಿಷ್ಯನ ಕಡಗೆ ಹರಿದು, ಶಿಷ್ಯನ ಭಕ್ತಿ ಅದರೊಳಗೆ ಐಕ್ಯವಾದಾಗ, ಅವರಿಬ್ಬರ ನಡುವೆ ಅದ್ವೈ ೃತ ಸಮನಿಸುತ್ತದೆ. ಗುರುವೆಂಬ ಜ್ಯೋತಿ ಶಿಷ್ಯನೆಂಬ ಹಣತೆಯನ್ನು ಮುಟ್ಟಿದಾಗ, ಆವೆರಡೂ ಅಭಿನ್ನಗಳಾಗುತ್ತವಷ್ಟೇ. ಆದರೆ ಇಲ್ಲಿ ಪ್ರಸ್ತುತದ ಸ್ಥಿತಿ ಹಾಗಿರಲಿಲ್ಲ. ಒಂದರೊಳಗೊಂದು ಬೆರೆಯುವ ಸಮಯದಲ್ಲಿ ಸಾಮರ್ಸ್ಯಸದ ಬಿಂದಿಗೆ ಹೊಡೆದು ಹೋಯಿತು. ಸಮುಖ್ಯವಾಗಲಿ, ಭಾತೃತ್ವವಾಗಲಿ ಇನ್ನೆಲ್ಲಿಯದು. ಕೆಲವೊಮ್ಮೆ ಅಂತರಂಗದಲ್ಲಿ ಅವರಿಬ್ಬರ ನಡುವೆ ಅದ್ವಿತೀಯತೆಯ ತುಮಲ ಅಧಿಕವಾಗಬಹುದು.

ತಿಕ್ಕಯ್ಯನಿಗಿದ್ದ ಅಚಲ ಭಕ್ತಿ, ಶ್ರದ್ಧೆ ಹಾಗೂ ಕಾಯಕ ನಿಷ್ಠೆಗಳು ಆತನಿಗೆ ಎರ್ರಿತಾತನಿಗೂ ನಿಕಟತ್ವ ಪಡೆಯುವ ಸಹಕಾರಿಯಾದವು. ಕಷ್ಟ ಕಾರ್ಪಣ್ಯಗಳು ತಲೆದೋರಿದಾಗ ಮಾತ್ರ ಮನುಷ್ಯ, ದೈವವನ್ನು ನೆನೆಯುವುದು ಸಾಮಾನ್ಯ. ಆದರೆ ತಿಕ್ಕಯ್ಯನ ವ್ಯಕ್ತಿತ್ವವೇ ಬೇರೆ ತನ್ನನ್ನು ದೂರ ಕಳುಹಿಸಿದನೆಂದು ತಾತನ ಕುರಿತ ಅಪಪ್ರಚಾರವಾಗಲಿ, ಅವಹೇಳನಕಾರಿಯಾದ ಸಂಗತಿಗಳಾಗಲಿ ಸಾರದೇ ನನ್ನಲ್ಲಿರುವ ಭೇದಗಳನ್ನು ತೆಗದು ಕಾಪಾಡಯ್ಯ ಎಂದು ನೀನೇ ಕಾಪಾಡು ಎನ್ನುವ ಗೀತೆಯಲ್ಲಿ ಆಧ್ಯಾತ್ಮಿಕ ನೆಲೆಯ ಭಾವನೆಗಳನ್ನು ಬಿತ್ತರಿಸಿದ್ದಾರೆ.

ಶಿವರಾಮಾವಧೂತರು

ಭಾರತದಲ್ಲಿ ಪುರಾತನ ಕಾಲದಿಂದಲೂ ಶಿಷ್ಯ ಪರಂಪರೆಗೆ ಎಲ್ಲಿಲ್ಲದ ಮಹತ್ವವಿದೆ. ಗುರುವಿಗೆ ಆಸರೆಯಾಗಿ ಅವರ ಸಿದ್ಧಿಗೆ ಸದಾ ಬೆನ್ನೆಲುಬಾಗಿ ನಿಂತಿದ್ದಿವರು ಶಿಷ್ಯರು. ಆರೂಢರಾಗಲೀ, ಸಾಧು ಸಂತರಾಗಲೀ, ನಾಥಸೂಫಿಗಳಾಲೀ. ಅವಧೂತರಂತಹ ಯೌಗಿಕ ಪುರುಷರಾಗಲೀ ಶಿಷ್ಯತ್ವಕ್ಕೆ ಇಂಬುಕೊಟ್ಟವರು. ಕೆಲವರು ಶಿಸುಮಕ್ಕಳನ್ನು ತಾವಾಗಿಯೇ ಮಾಡಿಕೊಂಡಿರುವುದು ಕಂಡುಬರುತ್ತದೆ. ಇನ್ನು ಕೆಲವರ ವರ್ತನೆ ಯೋಗ ಸಾಧನೆಗಳನ್ನು ಕಂಡು ಶಿಷ್ಯರಾಗಿರುವುದು ನಮ್ಮ ಪರಂಪರೆಯನ್ನು ಅವಲೋಕಿಸಿದಾಗ ತಿಳಿದುಬರುತ್ತದೆ. ಅಂಥವವರ ಸಾಲಿನಲ್ಲಿ ಚೇಳಗುರಿಕೆ ಎರ್ರಿತಾತನು ನಿಲ್ಲುತ್ತಾನೆ. ಆತನು ಶಿಷ್ಯರನ್ನು ಬೇಕಂತಲೇ ಮಾಡಿಕೊಳ್ಳುತ್ತಿಲ್ಲ. ಆತನ ವಿಚಿತ್ರ ಅಲೌಕಿಕ ಭಾವವನ್ನು ಕಂಡ ಜನರು ತಾವಾಗಿಯೇ ಬಂದು ಶರಣಾಗುತ್ತಿದ್ದರು. ಸದಾ ಮೌನವೇ ಆಭರಣವೆಂಬಂದಿರುತ್ತಿದ್ದ ಎರ್ರಿತಾತನಿಗೆ ಮಾತಾಡಿ ಶಿಷ್ಯ ಬಳಗಕ್ಕೆ ಉಪದೇಶಿಸುವುದು ಹೇಗೆ ಸಾಧ್ಯವಾದೀತು? ಕೆಲವೊಮ್ಮೆ ಅರಿವಿಲ್ಲದಂತೆ ಮಾತಾಡುತ್ತಿದ್ದ ಮಾತುಗಳಿಗೆ ತುಂಬಾ ಅಗೋಚರ ಶಕ್ತಿ ಆವರಿಸಿ ಬಿಡುತ್ತಿತ್ತು ಎಂದು ಅವರ ಪವಾಡ ಸಾದೃಶ್ಯಗಳನ್ನು ಗಮನಿಸಿದಾಗ ಅರಿವಾಗುತ್ತದೆ. ತಿಕ್ಕಯ್ಯನ ನಂತರ ಎರ್ರಿತಾತನ ಒಡ್ಡೋಲಗದಲ್ಲಿ ವಿಲಕ್ಷಣ ಮರಿಯಾಗಿ ಆತನ ಸೇವೆಯಗೈದ ಶಿಷ್ಯ ಸಂಕುಲದಲ್ಲಿ ಅದ್ವಿತೀಯರು ಹಾಗೂ ಅತ್ಯಂತ ನಿಷ್ಠೆಯುಳ್ಳವರಲ್ಲಿ ಶಿವರಾಮಾವಧೂತರು ಮೊದಲಿಗರಾಗುತ್ತಾರೆ. ಏಕೆಂದರೆ ಗುರುವಿನ ಆಜ್ಞೆಯಂತೆ ತುಮಕೂರಿಗೆ ಹೋಗಿ ಚಕ್ಕಲಿ ತಾರಯ್ಯಾ ಎನ್ನುವ ಮಾತೇ ಆತನ ಕಿವಿಯೊಳಗೆ, ಮನಸ್ಸಿನೊಳಗೆ ಸಂಚರಿಸಿತು. ಅದರ ದೂರವಾಗಲೀ ಅಷ್ಟು ದೂರ ಪ್ರಯಾಣಿಸುವುದೆಂತು? ಎನ್ನುವ ಆಕಾರ ವಿಕಾರವಾದ ಪ್ರಶ್ನೆಗಳ ಗೋಜಿಗೆ ಹೋಗದೆ ನಡೆದುದ್ದೇ ಹಾದಿ ಎನ್ನುವ ಮಂತ್ರ ಜಪಿಸುತ್ತಾ ಕಾಲ್ನಡಿಗೆಯಲ್ಲಿ ನಡೆದರು. ಆ ಕಾಲದಲ್ಲಿ ವಾಹನ ಸಂಚಾರದ ವ್ಯವಸ್ಥೆಯೂ ಅಷ್ಟಕಷ್ಟೆ.

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಕುರುಪತಿ ಮೈಲಾರ ಗ್ರಾಮದಲ್ಲಿ ನಿತ್ಯ ಪೂಜಾ ಸಂಪ್ರದಾಯ ಹಾಗೂ ದೈವಭಕ್ತಿಯ ಕುಟುಂಬದ ಮಾಳೆವ್ವ ಎಂಬ ಶಿವಭಕ್ತಳಿಗೆ ಸುಮಾರು ನೂರೈವತ್ತು ವರುಷಗಳ ಹಿಂದೆ ಶಿವರಾಮಾವಧೂತರು ಜನಿಸಿದರು. ಮೈಲಾರ ನೆಂಬುದು ಅವನ ಮೊದಲ ಹೆಸರು. ವಾಲ್ಮೀಕಿ ಸಮುದಾಯದ ಕೃಷಿಕ ಕುಟುಂಬದಲ್ಲಿ ಅವತರಿಸಿದ ಇವರು, ಮನೆ, ಸಾಂಸಾರಿಕ ಬದುಕಿನಿಂದ ಬಹುಬೇಗನೆ ಜಡತ್ವ ತಾಳಿದರು. ಶಿವರಾಮಾವಧೂತನ ಸೇವಾ ನಿರತೆಯಾಗಲೀ, ತುಮಕೂರಿಗೆ ಹೋಗಿ ಚಕ್ಕುಲಿ ತರಲು ಪಟ್ಟ ಪ್ರಯಾಸವಾಗಲೀ ತೀರಾ ಭಕ್ತಿಯ ಪ್ರಣತಿಗೆ ದೀನತೆಯ ಭಾವವನ್ನು ಪಸರಿಸುವಂತೆ ಮಾಡುತ್ತದೆ. ಗುರು ಪಂಥಗಳಲ್ಲಿ ಶಿಷ್ಯನನ್ನು ಹುಡುಕುವುದು, ದೀಕ್ಷೆಕೊಟ್ಟು ಹೊಸ ನಾಮಕರಣ ಮಾಡುವುದು, ಪರೀಕ್ಷೆಗೆ ಒಡ್ಡುವುದು ಮತ್ತು ಸಾಧನೆ ಮಾಡಿಸುವುದು ಸಾಮಾನ್ಯ. ಹೆತ್ತವರು ಗುರುವಿಗೆ ಮಗನನ್ನು ಒಪ್ಪಿಸುವಾಗ ಇಂದಿನಿಂದ ನೀನು ನನ್ನ ಮಗನಲ್ಲ ಎಂದು ಸಾಂಕೇತಿಕವಾಗಿ ಸಂಬಂಧ ಕಡಿದುಕೊಳ್ಳುತ್ತಾರೆ. ದೀಕ್ಷೆ ಕೊಡುವ ಗುರು ಇವತ್ತಿನಿಂದ ನೀನು ನನ್ನ ಶಿಸುಮಗ ಎಂದು ಹೊಸ ಪಿತೃತ್ವದ ಸಂಬಂಧ ಸ್ಥಾಪಿಸುತ್ತಾನೆ. ಗುರು ಶಿಷ್ಯರ ಸಂಬಂಧ ಪಿತೃಸಮಾನ ಯಾವುದೇ ಭಿನ್ನ ಮತ್ಸರ ಮುಂತಾದ ದೋಷಗಳಿಂದ ಬಹುದೂರ ನಿಲ್ಲಿಸಿಬಿಡುವಂಥದ್ದು. ಹಾಗಾಗಿಯೇ ಮಂಟೇಸ್ವಾಮಿ

ಕಾವ್ಯದಲ್ಲಿ ಗುರುವಿಗೆ ಶಿಷ್ಯರು ಅಪ್ಪಾಜಿ ಎಂದೇ ಕರೆಯಲಾಗಿದೆ. ವಿರಾಗಿಮೂರ್ತಿಯಾದ ಮೈಲಾರನು ಭವದ ಬಂಧನಗಳಿಂದ ಜಿಗುಪ್ಸೆಗೊಂಡು ಅಲ್ಲಲ್ಲಿ ತೀರ್ಥಯಾತ್ರೆಗಳನ್ನು ಸಂದರ್ಶಿಸಿ ಭಕ್ತಿಯಿಂದ ಶಿವನನ್ನು ಭಜಿಸುತ್ತಾ ಬರೀ ಮೈಯಿಂದ ಬಂದವನೂ? ಮೈಲಾರನನ್ನು ಸಮೀಪಕ್ಕೆ ಪರಮ ವಿರಕ್ತನೂ ಬರೀ ಮೈಯಿಂದ ಬಂದವನೂ ಆದ ಮೈಲಾರನನ್ನು ಸಮೀಪಕ್ಕೆ ಕರೆದು ಅಯ್ಯಾ, ಮಹಾತ್ಮಾ ನಿನ್ನ ಗುರು ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಿರುವನು ಆ ದಕ್ಷಿಣಾಮೂರ್ತಿ ನೀನು ಆ ಮಹಾತ್ಮರ ಸನ್ನಿಧಿಗೆ ತೆರಳು. ಅವರ ಅನುಗ್ರಹಕ್ಕೆ ಪಾತ್ರನಾಗು ಆ ಮಹಾಮಹಿಮ ಗುರುವಿನ ಗುರುಬೋಧೆಯಿಂದ ನಿನ್ನ ಜನ್ಮ ಸಾರ್ಥಕವಾಗುವುದು ಎಂದು ಹೇಳಿ ಸಿದ್ಧಾರೂಢರು ಮೈಲಾರನನ್ನು ಆಶೀರ್ವದಿಸಿ ಕಳುಹಿಸಿಕೊಟ್ಟರು. ಸಿದ್ಧಾರೂಢರ ಅಣತಿಯಂತೆ ಮೈಲಾರನು ಹುಬ್ಬಳಿಯಿಂದ ಹೊರಟು ಸಂಚಾರ ಮಾಡುತ್ತಾ ಸಿದ್ಧಪರ್ವತಕ್ಕೆ ಬಂದನು. ಅಲ್ಲಿ ಮತ್ತೊಂದು ತರಹದ ದೈವವಾಣಿಯು ಕೇಳಿಸಿತು. ದೇವಿ ಬಗಳಾಂಬಿಕೆಯು ತನ್ನ ದಿವ್ಯ ಸ್ವರೂಪವನ್ನೇ ತೋರುತ್ತಾ ದರ್ಶನ ನೀಡಿದಳು. ಮಗು ನೀನು ಈಗಾಗಲೇ ಒಬ್ಬ ಮಹಾಪುರುಷನ ದರ್ಶನ ಪಡೆದು, ಅವನ ಆಜ್ಞೆಯಂತೆ ಗುರುವನ್ನು ಹುಡುಕುತ್ತಾ ಹೊರಟಿರುವೆ. ನಿನಗೆ ಸುಜ್ಞಾನದ ಜ್ಞಾನನೀಡಿ ಗುರು ಕರುಣೆಯ ವರ ಪ್ರಸಾದ ನೀಡಿ ಉದ್ಧಾರ ಮಾಡಬಲ್ಲ ಮಹಾಚೇತನ ಚೇಳಗುರಿಕೆಯಲ್ಲಿರುವನು ಎಂಬ ದಿವ್ಯವಾಣಿಯಯನ್ನು ಪರಿಗ್ರಹಿಸಿ ನಡೆದನು.

ಮಠದೊಳಗಿನ ಹಿರಿಯರು ಶಿವರಾಮಾವಧೂತನ ವಿಚಿತ್ರ ವರ್ತನೆಗಳನ್ನು ಕಂಡು ಯಾರೋ ಹುಚ್ಚನಿರಬೇಕೆಂದು ಆತನನ್ನೂ ಒಳಗಡೆ ಸೇರಗೊಡದೆ, ಹೊರಕ್ಕೆ ತಳ್ಳಿದರು. ಆದರೆ, ಅವರಾಡುವ ಧೂಷಣೆಯ ಮಾತುಗಳಿಗೆ ಕುಂದದವನಾಗಿ ರಾತ್ರಿಯಾದ ಕೂಡಲೇ ಯಾರು ಇಲ್ಲದ ಸಂಧಿಯನ್ನು ಗಮನಿಸಿ ತನ್ನ ಅಂತರಂಗದ ಗುರು ಎರ್ರಿತಾತನಿಗೆ ಪಾದಸೇವೆಯನ್ನು ಇರುಳೆಲ್ಲ ಆತನ ಮನಸ್ಸು ಒಪ್ಪುವಂತೆ ಮಾಡಿ ಬೆಳಗಾಗುವುದರೊಳಗಾಗಿ ಮಠದ ಒಳಭಾಗದ ಕಸವನ್ನು ಬಳಿದು, ಶುದ್ಧಿಮಾಡಿ ಮೊದಲಿನಂತೆ ಮಠದ ಹೊರಗಡೆಯೇ ಮಲಗುತ್ತಿದ್ದನು. ಅಲ್ಲಿಂದ ಮಠದವರು ಮಠದ ಒಳಭಾಗದ ಶುದ್ಧಿಯನ್ನು ಯಾರು ಮಾಡಿದರೆಂದು ತಮ್ಮ ತಮ್ಮೊಳಗೆ ಮಾತನಾಡಿ ಯಾರೆಂಬುದನ್ನು ತಿಳಿಯದೆ ಸುಮ್ಮನಾಗುತ್ತಿದ್ದರು. ಒಂದು ದಿನ ಶಿವರಾಮಾವಧೂತರು ತನ್ನಲ್ಲಿ ಭಕ್ತಿಯು ಪರಾಕಾಷ್ಠತೆಯೆಡೆಗೆ ವಿಸ್ತರಿಸಿಕೊಂಡಂತೆಲ್ಲ ರಾತ್ರಿ ಆತನು ಕುಣಿದಾಡುತ್ತಾ, ಕೇಕೆ ಮುಂತಾದ ಆನಂದ ಲಹರಿಯ ಶಬ್ಧಗಳಿಂದ ತನ್ನ ಗುರುವಿನ ಸೇವೆಯನ್ನು ಮಾಡುತ್ತಿದ್ದನು. ಅದನ್ನು ಗಮನಿಸಿದ ಕೆಲವು ಜನರು ನೋಡಿ ಓಹೋ ಈತನನ್ನು ಹುಚ್ಚನೆಂದು ಬಗೆದಿದ್ದೇವು, ಆದರೆ ಈತನು ಎರ್ರಿತಾತನ ಪರಮ ಭಕ್ತನೆಂದು ತಿಳಿದರು. ಯಾವುದೇ ಹಮ್ಮು ಬಿಮ್ಮುಗಳಿಲ್ಲದ ಉತ್ಕಟ ಸೇವೆ ಆತನದು. ಸೇವೆಯಿಂದೊದಗುವ ಈ ಪರಮಾನಂದವು ಬಹು ದಿವಸಗಳಿಂದ ಇಲ್ಲಿಯೇ ವಾಸವಾಗಿರುವ ನಮ್ಮಗಳಿಗೇಕೆ ದೊರೆಯದೇ ಹೋಯಿತು. ಧೇನುವಿನ ಕೆಚ್ಚಲಲ್ಲಿಯೇ ವಾಸಮಾಡಿದ್ದ ಉಣ್ಣೆಯು ಎಂದೂ ಹಾಲು ಸವಿಯಲಿಲ್ಲ. ದೂರದಲ್ಲಿ ಕಟ್ಟಿಹಾಕಿದ್ದ ಕರುವಿಗೆ ಗೋ ಕೆಚ್ಚಲೊಳಗಿನ ಹಾಲು ಪಾನೀಯವಾದಂತೆ ಬಹುದಿವಸದಿಂದ ಈ ಮಹನೀಯನಲ್ಲಿ ವಾಸವಾಗಿದ್ದ ನಮ್ಮಗಳಿಗೆ ಈ ಭಕ್ತಿಯು ಬರಲಿಲ್ಲವೆಂದು ತಮ್ಮ ತಮ್ಮೊಳಗೆ ತಮ್ಮ ಮೌಢ್ಯತನವನ್ನು ಧೂಷಿಸಿಕೊಳ್ಳುತ್ತಾ ಶಿವರಾಮನ ಭಕ್ತಿ ಭಾವಕ್ಕೆ ಮೆಚ್ಚಿ ಆತನ ಯಾವುದೇ ಪೂರ್ವಾಚರ ಸಂಗತಿಗಳನ್ನು ಪ್ರಶ್ನಿಸದೆ ತಾವುಗಳು ಮಠವನ್ನು ಬಿಟ್ಟು ಹೋಗಬೇಡಿರಿ ಇಲ್ಲಿಯೇ ವಾಸಮಾಡಿರೆಂದು ಮಠದ ಒಳಭಾಗದಲ್ಲಿ ಒಂದು ಸಣ್ಣ ಗುಡಿಸಲನ್ನು ಹಾಕಿ ಕೊಟ್ಟರು.

ಸಿದ್ಧಲಿಂಗಪ್ಪ

ಎರ್ರಿತಾತನ ಸೇವೆಗೈದ ಶಿಷ್ಯ ಸಮೂಹದಲ್ಲಿ ಸಿದ್ಧಲಿಂಗಪ್ಪನು ಒಬ್ಬ ನಿಷ್ಠಾವಂತನಾಗಿದ್ದನು. ತಿಕ್ಕಯ್ಯನ ನಂತರ ಮಠದ ಪಾರುಪತ್ಯಗಾರನಾಗಿ ತಾತನ ಸೇವೆನ್ನೆಲ್ಲಾ ದಕ್ಷತೆಯಿಂದ ನೆರವೇರಿಸಿಕೊಂಡು ಹೋಗುವ ಜವಾಬ್ದಾರಿ ಸಿದ್ಧಲಿಂಗಪ್ಪನಿಗೆ ಬಂದಿತು. ಪ್ರಾರಂಭದಲ್ಲಿ ಗುರುವನ್ನು ಭಕ್ತಿಯ ಹಂದರದೊಳಗೆ ತೇಲಿಸಿದ. ಅನಂತರದ ದಿನಗಳಲ್ಲಿ ಸಲಿಗೆಯಂತೆ ಇರುತ್ತಿದ್ದ ಎರ್ರಿತಾತನಿಗೆ ಹಲವು ತಮಾಷೆ ಹಾಗೂ ಕುಚೇಷ್ಟೆಗಳಿಂದ ಆತನಿಗೆ ಅವಿನಯತೆಯನ್ನು ತೋರಿಸುತ್ತಿದ್ದನು. ಮೊದ ಮೊದಲಿಗಿದ್ದ ಗೌರವ ಪೂಜಾಭಾವನೆಗಳು ಮಾಯವಾಗಿ ಅಹಂಕಾರವನ್ನು ಮೈಯೆಲ್ಲಾ ಎರಚಿಕೊಂಡವನಂತೆ ವಿಚಿತ್ರವರ್ತನೆಗಳನ್ನು ಗೈಯುತ್ತಿದ್ದನು. ಸಿದ್ಧಲಿಂಗಪ್ಪನ ಕುರಿತ ಒಂದು ಪ್ರಸಂಗವನ್ನು ತಿಳಿದಾಗ ಅದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಮಠಕ್ಕೆ ಬಂದವರೆಲ್ಲ ತಾತನಿಗೆ ನಮಸ್ಕಾರ ಮಾಡಿದಂತೆ, ತಾತನ ಸೇವೆಯಲ್ಲಿದ್ದ ಸಿದ್ಧಲಿಂಗಪ್ಪನಿಗೂ ನಮಸ್ಕಾರ ಮಾಡುತ್ತಿದ್ದರಂತೆ ಜಾತಿಯಿಂದ ಜಂಗಮನಲ್ಲದ, ಯೋಗ್ಯತೆಯಿಂದ ಯೋಗಿಯಲ್ಲದ ಈ ಸಿದ್ಧಲಿಂಗಪ್ಪನು ಮಠದಯ್ಯನಂತೆ, ಮಹಾ ಮಹೇಶ್ವರಾಚಾರ್ಯರಂತೆ ಕಾಲಿಗೆ ನಮಸ್ಕಾರ ಮಾಡಿಸಿಕೊಳ್ಳುತ್ತಿದ್ದನು. ಮೇಲಿನ ಜಾತಿಯವರೆ ನಮಸ್ಕಾರಕ್ಕಾಗಲೀ, ಪೂಜೆಗಾಗಲೀ ಅರ್ಹನೆಂಬುವುದು ಪ್ರಸ್ತುತ ಅಧ್ಯಯನದ ವಾದವಲ್ಲ. ಆ ಕಾಲದ ವಸ್ತುಸ್ಥಿತಿಗಳು ವಿಲ ವಿಲನೆ ಒದ್ದಾಡುತ್ತಿದ್ದ ಕಗ್ಗತ್ತಲೆಯ ಕಾಲ ಅದು. ಈ ನೆಲದಲ್ಲಿ ಅದರ ಕ್ರೌರ್ಯ ಇನ್ನಷ್ಟು ಭೀಕರ ಸ್ವರೂಪ ಪಡೆದಿತ್ತೇಂದು ಹೇಳಬಹುದು. ಇಂದಿನ ದಿನಗಳಲ್ಲಿ ಸಂಪೂರ್ಣ ಬದಲಾವಣೆ ಅಲ್ಲದಿದ್ದರೂ, ಅದರ ತೀವ್ರತೆ ಸ್ವಲ್ಪ ಕಡಿಮೆ ಎನ್ನಬಹುದು. ಅಂತಹ ಸಂಕೀರ್ಣ ಮತ್ತು ಸಂದಿಗ್ಧ ಪರಿಸ್ಥಿಯಲ್ಲಿ ಸಿದ್ಧಲಿಂಗಪ್ಪನು ಮೂಲತಃ ಯಾವ ಸಮುದಾಯಕ್ಕೆ ಸೇರಿದವನು ಎಂಬುದು ಯಾವ ಆಧಾರಗಳಲ್ಲಿಯೂ ದಾಖಲಾಗಿಲ್ಲ. ಆತನ ವಿಚಿತ್ರ ರೀತಿಯ ಅಹಂಭಾವದ ಮನಸ್ಥಿತಿಯನ್ನು ಅರಿತ ಎರ್ರಿತಾತನು ಕಾಲು ಹೋಗ್ತಾವೆ ಕಾಲುಹೋಗ್ತಾವೆ ಎಂದರಂತೆ ಒಂದೆರೆಡು ಸಲ ಅಹಂವೆಂಬುದು ಕೆಲವು ಸಲ ವಿನಾಶವನ್ನು ತಂದೊಡ್ಡುತ್ತದೆ. ಎಂಬುದನ್ನೆ ಅಷ್ಟಾಗಿ ಪರಿಗಣಿಸದ ಆತನು ಅರಿತೋ ಅರಿಯದೆಯೋ ಕಾಲಗೆರಗುತ್ತಿದ್ದ ಭಕ್ತರಿಗೆ ಕಾಲು ಜೋಡಿಸುತ್ತಿದ್ದನು. ಗುರುವಾಜ್ಞೆ ಮೀರಿದವರಿಗೆ ಆಗುವ ಅನಾಹುತಗಳು ಆತನಿಗೆ ಅಷ್ಟಾಗಿ ಮನವರಿಕೆಯಾಗಿಲ್ಲ. ಮನಸ್ಸಿಚ್ಛೆಯನ್ನು ಪೂರೈಸುವುದು ಇಹದ ಲೌಕಿಕಾನುಭವಗಳು ಸುತ್ತುವರೆದು ತರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ಸುತ್ತಿ ಸುತ್ತಿಸಾವ ತೆರವಂತೆ ಎನ್ನುವ ಸಾರವತ್ತಾದ ವಚನದಂತೆ ಕೊನೆಗೆ ಒಂದು ದಿನ ಎರ್ರಿತಾತನು ಸಿದ್ಧಲಿಂಗಪ್ಪನಿಗೆ ಶಾಪವಿತ್ತನು.

ಅದೊಂದು ಸಿದ್ಧಲಿಂಗನ ಬದುಕಿನೊಳಗೆ ಬರಬಾರದ ದುರ್ದಿನವಾಗಿತ್ತು. ಯಥಾ ಪ್ರಕಾರ ತಾತನಿಗೆ ಸ್ನಾನ ಮಾಡಿಸಿ ಉಡಿಗೆ ಉಡಿಸುತ್ತಿದ್ದನು. ಅತಿಪರಿಚಯಾದವ ಜ್ಞಾಭವತಿ ಎಂಬಂತೆ ಬೊಜ್ಜು ಬಂತು ಎಂದನಂತೆ ಬೆಳೆಯುತ್ತಿದ ಅವನ ಅಹಂಕಾರವನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದ ಎರ್ರಿತಾತನು ಸಿಟ್ಟಿಗೆದ್ದು ಸೂಳೇ ಮಗನೇ ಗೇಲಿ ಮಾಡ್ತೀಯಾ ಗೋಲೀಲಿ ಸುಟ್ಟೆನು ಎಂದರಂತೆ ಸೋಹಂ ಭಾವಕ್ಕಿಂತ ದಾಸೋಹಂ ಭಾವದಿಂದ ಮುಮುಕ್ಷುವು ಬೇಗನೇ ಮೇಲೇರ ಬಲ್ಲ. ದಾಸೋಹ ಭಾವ, ಕೃತಜ್ಞತೆ, ವಿನಯತೆ, ದೀನತೆ ಅಳವಡಿಸಿಕೊಳ್ಳದ ಶಿಷ್ಯ ಬಲು ಬೇಗನೇ ಪತನಗೊಳ್ಳುವನು. ಸತ್ವಪೂರ್ಣನಾಗಿ ಸಾಧನೆಯಲ್ಲಿ ಸಾಗಿದಾಗ ಅವನ ಬುದುಕು ಗಾಳಿಯ ಪಟದಂತೆ ಮೇಲಿರುವುದು. ಅಲ್ಲಿ ದೈವೀಶಾಲಿಯೇ ಗಾಳಿಪಟವನ್ನು ಹಿಡಿದ ಕೈ ದೈವಿ ಕಾರುಣ್ಯವೇ ಹಗ್ಗ. ಗುರುವೇ ಶಿಷ್ಯನೆಂಬ ಗಾಳಿಪಟವನ್ನು ಸಮತೋಲನದಲ್ಲಿಡಲು ಬಾಲಂಗೋಸಿ. ಎಲ್ಲವೂ ಸೇರಿಯೇ ಶಿಷ್ಯನೆಂದು ಗಾಳಿಪಟ ಆಧ್ಯಾತ್ಮದ ಆಗಸದಲ್ಲಿ ಸಂಚರಿಸುತ್ತದೆ. ಶಿಷ್ಯನೆಂಬುವನು ಬಹಳ ಎಚ್ಚರದಿಂದ ಹಾರಬೇಕಾಗುತ್ತದೆ. ಗುರುವಾಗಲೀ ದೈವವಾಗಲೀ ಕೈ ಬಿಟ್ಟರೆ ಸೂತ್ರವು ಹರಿದು ಶಿಷ್ಯನೆಂಬ

ಗಾಳಿಪಟ ಗೋತ ಹೊಡೆಯದಿರದು. ಎಲ್ಲರ ಕಣ್ಣಿಗೆ ಕಾಣುವುದು ಗಾಳಿಪಟವೇ ಆದರೂ ಅದರ ಹಿಂದೆ ಇಷ್ಟೆಲ್ಲ ಶಕ್ತಿಗಳು ಕೆಲಸ ಮಾಡದೆ ಇರವು. ಇದಾವ ವಸ್ತುಗಳ ನೆರವಿಲ್ಲದೆ ತಾನು ಹಾರಾಡಬೇಕೆಂದು ಅಹಂಭಾವದಿಂದ ಹೊರಟ ಶಿಷ್ಯನ ಪಾಡಾದರೂ ಇದೇ ಆಗುವುದು.

ಕೆಲವು ದಿನಗಳು ಕಳೆದ ಮೇಲೆ ರೆವಿನ್ಯೂ ಅಧಿಕಾರಿಗಳು ಜಮಾ ಬಂದಿಗೆಂದು ಬಂದು ಮಠದಲ್ಲಿಯೇ ವಸತಿ ಮಾಡಿದ್ದರು. ಅವರಲ್ಲಿದ್ದ ಬಾರು ಮಾಡಿದ್ದ ಬಂದೂಕು ಒಂದು ಮೂಲೆಯಲ್ಲಿ ಒರಗಿಸಲ್ಪಟ್ಟಿತ್ತು. ಅಜಾಗರೂಕತೆಯಿಂದ ಅದನ್ನು ಯಾರೋ ತಡವಿದ್ದರಿಂದ ಅದರ ಗುಂಡು ಹಾರಿ ಜನರ ಮಧ್ಯದಲ್ಲಿದ್ದ ಸಿದ್ಧಲಿಂಗಪ್ಪನವರು ಕಾಲಿಗೆ ತಗುಲಿತು. ಅನಿರೀಕ್ಷಿತವಾಗಿ ಎರ್ರಿತಾತನ ಮಾತಿನಂತೆ ಕಾಲು ಹೋಯಿತು. ಪವಾಡ ಪುರುಷ ಬಳಿಯಲ್ಲಿ ಕುವ್ವಾಡ ನಡೆಯಲಾರದು. ಅನಧಿಕಾರಿಗಳು ಅಹಂಕರಿಸಿ ಅಧಿಕಾರಿಗಳಂತೆ ವರ್ತಿಸಬಾರದು. ಹಾವಿನ ಹೆಡೆಯ ಕೊಂಡು ಕನ್ನೆಯ ತುರಿಸಿಕೊಂಬಂತೆ, ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕು ಬಿಡಿಸಿಕೊಂಬಂತೆ, ಹುಲಿಯ ಮೀಸೆಯ ಹಿಡಿದುಕೊಂಡು ಉಯ್ಯಾಲೆಯನ್ನಾಡುವಂತೆ ಕೂಡಲ ಸಂಗನ ಶರಣನೊಡನೆ ಸರಸವಾಡಿದರೆ ಸುಣ್ಣದಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ ಎಂಬ ಸೂಳ್ನುಡಿಯು ಸಿದ್ಧಲಿಂಗಪ್ಪನ ಬಾಳಲ್ಲಿ ನಡೆಯಿತು. ಗುರುಶಿಷ್ಯರ ಸಂಬಂಧ ಶಿಲ್ಪಿ ಶಿಲ್ಪದ ಸಂಬಂಧ. ಗುರುವು ಶಿಷ್ಯನಲ್ಲಿರುವ ಒಂದು ಪ್ರತಿಭೆಯನ್ನು ಗುರುತಿಸಿ, ಶಿಲ್ಪಿ ಕಲ್ಲಿನಲ್ಲಿ ಒಂದು ಚಿತ್ರದ ರೂಪುರೇಷೆ ಹಾಕಿಕೊಳ್ಳುವಂತೆ ಅದನ್ನು ಪ್ರಕಟಗೊಳಿಸುವಂತೆ ಸಂಸ್ಕರಿಸುತ್ತಾ ಹೋಗುವವನು. ಕೆಲವೊಮ್ಮೆ ಅವನ ಆಯ್ಕೆ ತಪ್ಪಾಗುತ್ತದೆ. ಒಂದು ಹಿಟ್ಟುಗಲ್ಲನ್ನೋ, ಕಠಿಣ ಶಿಲೆಯನ್ನೋ ತೆಗೆದುಕೊಂಡು ಬಿಟ್ಟಿರುತ್ತಾನೆ. ಅದು ಕಟೆಸಿಕೊಳ್ಳುವ ಕಲ್ಲಾಗದೆ ಪುಡಿ ಪುಡಿಯಾಗುತ್ತದೆ. ಅದೇ ಕಲ್ಲಿನ ಚೂರು ಕಣ್ಣಿಗೆ ಬಡಿದು ಬಾಧೆಯನ್ನು ಕೊಡುತ್ತದೆ. ಸಿದ್ಧಲಿಂಗಪ್ಪನ ವರ್ತನೆಯು ಅದಕ್ಕೆ ಸಾಕ್ಷಿಯಾಗಿದೆ. ಹಾಗೆಯೇ ರಜೋಗುಣ ಪ್ರವೃತ್ತಿಯ ಚಂಚಲ ಮನಸ್ಕನಾದ ದುರ್ಬಲ ಶಿಷ್ಯನು ಹಿಟ್ಟಿಗಲ್ಲಿನಂತೆ ಪುಡಿಯಾಗುವುದು ಮಾತ್ರವಲ್ಲ, ಕಟೆಯುವ ಕಲಾವಿದನಿಗೂ ಬಾಧೆಕೊಡುವನು. ಕಠಿಣ ಶಿಲೆಯಾದರೆ ಶಿಲ್ಪಿ ನೀರಿಕ್ಷಿಸಿದಷ್ಟು ಸುಂದರ ಕಲಾಕೃತಿಯಾಗದೆ, ಒರಟಾದ ಮೂರ್ತಿಯಾಗುತ್ತದೆ. ಅದರಂತೆ ಶಿಷ್ಯನು ತೀಕ್ಷ್ಣಮತಿಯೂ, ಸದೃಢ ಮನುಷ್ಯನೂ ಆಗಿರದಿದ್ದರೆ ಪರಿಪೂರ್ಣ ಶಿಲ್ಪವಾಗದಿದ್ದರೂ ಪರವಾಗಿಲ್ಲ ಎಂಬಷ್ಟು ಆಗಿಬಿಡುತ್ತಾನೆ. ಶಿಲ್ಪಿಯ ಯೋಜನೆಗೆ ತಕ್ಕಂತೆ ಅದು ವಿಧೇಯವಾಗಿ ರೂಪಗೊಳ್ಳುತ್ತದೆ. ಅದರಲ್ಲಿರುವ ಸ್ವಭಾವವೂ ತಾತ್ವಿಕವೂ ಸದೃಢವೂ ಅಷ್ಟೇ ಪ್ರಕಾರವಾಗಿರುತ್ತದೆ.

ಪರಾಮರ್ಶನ ಗ್ರಂಥಗಳು

1. ಶೂನ್ಯ ಸಂಪಾದನೆಗಳು, ಸಾಂಸ್ಕೃತಿಕ ಮುಖಾಮುಖಿ, ಅಮರೇಶ ನುಗಡೋಣಿ, ಕ.ವಿ.ವಿ ಹಂಪಿ 2002.
2. ಲೀಲಾಮೃತ ಪುರಾಣ, ನಾಗೇಶ ಶಾಸ್ತ್ರೀ, ಎರ್ರಿಸ್ವಾಮಿಗಳ ಜೀವಸಮಾದಿ ಮಠ, ಚೇಳಗುರಿಕೆ 1966.
3. ಕರ್ನಾಟಕದ ನಾಥಪಂಥ, ರಹಮತ್ ತರೀಕೆರೆ, ಕ.ವಿ.ವಿ ಹಂಪಿ 2006.
4. ಕರ್ನಾಟಕದ ಸೂಫಿಗಳು, ರಹಮತ್ ತರೀಕೆರೆ, ಕ.ವಿ.ವಿ ಹಂಪಿ 2001